# Research maGma

(An International Multidisciplinary Journal)

**UGC Approved Journal No: 63465**

Editor in Chief
Dr. Sanjay Kumar Singh

Associate Editor
Dr. T. Manichander

# Research maGma

Research maGma is a multidisciplinary research journal, published monthly in all Language. All research papers submitted to the journal will be double - blind peer reviewed .


## Our Editorial Board

Dr Anil Kumar S.
Dr. Gatade Dattatraya Ganapati
Dr. Prashant Thote
Dr. Deepa Viswam
Dr. Anamika Kumari
Smt. B.S.Gunarekha
Dr. P. Samuel
Dr. Pargat Singh Garcha
Dr. M. Abdul Jamal
Dr. Tapas Pal
Dr. Gardi Balu Pandurang
Dr. Dnyaneshwar Babulal Shirode
Dr. Ashokkumar B. Surapur
Dr. N. Sasikumar
Dr. Saykar Satish Govind
Dr. A. Paul Albert
Dr. Atul Hansraj Salunke
Mr. Sanjeev Kumar Mishra
Dr. Neeta Sukhendrapal Singh
Dr. Kispotta Seraphinus
Dr. Santosh Kumar Behera
Dr. Sandhya Ayaskar
Dr. S. Aravind
Dr. Sandeep V. Binorkar
Dr. Raval Sandeep Krishnat
Dr. Mahesh Nawria
Dr. Tamanna Kaushal
Dr. Deepak B. Nale
Dr. Ram Chander
Dr. Sudhir Kumar Jena
Dr. S Maxwell Lyngdoh
Dr. Bhed Pal Gangwar
Dr. Shaikh Fahemeeda
Dr. Deshai Rajesh Bhaurao

Research maGma
An International Multidisciplinary Journal
ISSN- 2456-7078 IMPACT FACTOR- 4.520
VOL-1, ISSUE-10, DEC-2017

# ಸಹಪಠ್ಯ ಚಟುವಟಿಕೆಗಳು–ವಿಮರ್ಶೆ

[೧]ಪ್ರವೀಣ ಎ, [೨]ಸೌಮ್ಯ ವಿ
[೧,೨]ಉಪನ್ಯಾಸಕರು, ಕುವೆಂಪು ಶತಮಾನೋತ್ಸವ ಶಿಕ್ಷಣ ಮಹಾವಿದ್ಯಾಲಯ, ಶಿವಮೊಗ್ಗ.

## ಪೀಠಿಕೆ :

ಮಕ್ಕಳ ಸರ್ವತೋಮುಖ ಬೆಳವಣಿಗೆಯಾಗಬೇಕಾದರೆ, ಪಠ್ಯ ಪುಸ್ತಕದ ಬೋಧನೆ ಮಾತ್ರ ಸಹಕಾರಿಯಾಗುವದಿಲ್ಲ. ಸಹ ಪಠ್ಯ ಚಟುವಟಿಕೆಗಳನ್ನು ಸರಿಯಾಗಿ ನಿರ್ವಹಿಸಿ ಜಾರಿಯಲ್ಲಿ ತಂದರೆ ಪುಸ್ತಕಗಳಲ್ಲಿರುವ ಶಿಕ್ಷಣದ ದೋಷಗಳನ್ನು ನಿವಾರಿಸದಂತಾಗುವುದು. ವಿದ್ಯಾರ್ಥಿಗಳು ಪೌರರಾಗಿ ಉತ್ತಮ ಬಾಳನ್ನು ನಡೆಸಲು ಸಹ ಪಠ್ಯ ಚಟುವಟಿಕೆಯು ಅವಶ್ಯಕವಾಗಿದೆ. ಶಾಲಾ ಜೀವನದಲ್ಲಿ ಮಕ್ಕಳಲ್ಲಿ ಪೌರತ್ವದ ಚಟುವಟಿಕೆಗಳು ಅವಶ್ಯಕವಾಗಿದೆ. ಈ ಚಟುವಟಿಕೆೆಗಳ ಮೂಲಕ ಮಕ್ಕಳಲ್ಲಿ ಸಹಕಾರ ಮುಂದಾಳುತನ, ನಾಯಕತ್ವ ಮುಂತಾದ ಸಾಮಾಜಿಕ ಮತ್ತು ನೈತಿಕ ಗುಣಗಳನ್ನು ಮಕ್ಕಳಲ್ಲಿ ಅಭಿವೃದ್ಧಿಯಾಗುತ್ತದೆ. ಸಹಪಟ್ಯ ಚಟುವಟಿಕೆಗಳು ತರಗತಿಯ ಪಾಠಗಳಿಗಿಂತಲೂ ಹೆಚ್ಚು ಪರಿಣಾಮಕಾರಿಯಾಗಬಲ್ಲವು. ಇವು ಹಲವು ಉದ್ದೇಶ ಗಳನ್ನು ಸಾಧಿಸಲು ಯತ್ನಿಸಬೇಕು. ಈ ಸಹಪಠ್ಯ ಚಟುವಟಿಕೆಗಳು ವಿವಿಧ ರೀತಿಯಲ್ಲಿ ಸಂಘಟನೆಯ ಫಲಿತಾಂಶ ಅಥವಾ ಮಾಹಿತಿ ಕಂಡು ಬಂದಿವೆ.

## ಸಹಪಠ್ಯ ಚಟುವಟಿಕೆ:

ಹಿಂದಿನ ಶಿಕ್ಷಣವು ಪುಸ್ತಕ ಪ್ರಧಾನವಾಗಿತ್ತು ಹೊರಗಿನ ಸಾಮಾಜಿಕ ಜೀವನದೊಡನೆ ಸಂಬಂಧ ರಹಿತವಾಗಿತ್ತು. ಮಕ್ಕಳ ಸರ್ವತೋಮುಖವಾದ ಪರಿಪೂರ್ಣವಾದ ವಿಕಾಸಕ್ಕೆ ಈ ಶಿಕ್ಷಣವು ಸಹಕಾರಿಯಲ್ಲ. ಸಾದನವಲ್ಲ. ಶಾಲೆಗಳಲ್ಲಿ ಪಠ್ಯೇತರ ಚಟುವಟಿಕೆಗಳನ್ನು ಸುವ್ಯವಸ್ಥಿತವಾಗಿ ಯೋಜಿಸಿ ಅನುಷ್ಟಾನಕ್ಕೆ ತರುವುದಾದರೆ ಪುಸ್ತಕ ಶಿಕ್ಷಣದ ಪ್ರಮುಖ ದೋಷಗಳನ್ನು ನಿವಾರಿಸಬಹುದು. ಮಕ್ಕಳ ಶಿಕ್ಷಣ ಕಾರ್ಯದಲ್ಲಿ ಅವರ ಭೌದ್ಧಿಕ, ದೈಹಿಕ, ನೈತಿಕ ಆಧ್ಯಾತ್ಮೀಕ ಅನುಭವಗಳನ್ನು ಸುಸಂಘಟಿಸಿ ಮುಂದೆ ಅವರು ಉತ್ತಮ ಪೌರರಾಗಿ ತಮ್ಮ ಬಾಳನ್ನು ನಡೆಸಲು ಸಹಾಯಕ ಮಾಡುವುದೇ ಶಿಕ್ಷಣದ ಗುರಿ. ಈ ಗುರಿಯನ್ನು ಸಾದಿಸಲು ಮಕ್ಕಳು ಸಹಜ ಪ್ರವೃತ್ತಿಗಳನ್ನು ಸ್ವಾಭಾವಿಕವಾದ ಆಸಕ್ತಿಗಳನ್ನು ಶಿಕ್ಷಣ ವಿಧಾನದಲ್ಲಿ ಉಪಯೋ ಗಿಸಿಕೊಳ್ಳಬೇಕು.

ಶಾಲಾ ಜೀವನವು ಮಕ್ಕಳಲ್ಲಿ ಪೌರತ್ವದ ಪ್ರಧಾನ ತತ್ವಗಳನ್ನು ತಿಳಿಸಿದರೆ ಮಾತ್ರ ಮಕ್ಕಳನ್ನು ಪೌರ ಜೀವನಕ್ಕೆ ಸಿದ್ಧಪಡಿಸಿದಂತಾಗುವುದಿಲ್ಲ. ಶಾಲಾ ಸಮಾಜದ ವಿವಿಧ ಚಟುವಟಿಕೆಗಳಲ್ಲಿ ಅವರಿಗೆ ಭಾಗವಹಿಸಲು ಅವಕಾಶವನ್ನು ಕೊಟ್ಟು ಅವರಲ್ಲಿ ಯೋಗ್ಯವಾದ ಪ್ರವೃತ್ತಿಗಳನ್ನು, ಉತ್ತಮಶೀಲ, ಧ್ಯೇಯಗಳನ್ನು ಅಭ್ಯಾಸಗಳನ್ನು ಬೆಳೆಸ ಬೇಕು. ಈತ್ತೀಚೆಗೆ ಸಮಾಜಿಕ ಉದ್ದೇಶಗಳನ್ನು ಸಾಧಿಸಬೇಕಾದರೆ ಸಹಕಾರ ಮತ್ತು ಮುಂದಾಳುತನ ಮುಂತಾದ ಸಮಾಜಿಕ ಮತ್ತು ನೈತಿಕ ಗುಣಗಳನ್ನು ಮಕ್ಕಳಲ್ಲಿ ಅಭಿವೃದ್ಧಿ ಪಡಿಸಬೇಕಾದರೆ ಪಠ್ಯೇತರ ಚಟುಟಿಕೆಗಳು ತರಗತಿ ಪಾಠಗಳಿಗಿಂತಲೂ ಹೆಚ್ಚು ಪರಿಣಾಮಕಾರಿಯಾಗಬಲ್ಲವೆಂಬ ಭಾವನೆ ಹರಡಿತು.

ಸಹಪಠ್ಯ ಚಟುವಟಿಕೆಗಳು ಕೆಲವು ಉದ್ದೇಶಗಳನ್ನು ಸಾದಿಸಲು ಮಕ್ಕಳನ್ನು ಸಮಾಜದ ಜೀವನಕ್ಕೆ ಅರ್ಹರನ್ನಾಗಿ ಮಾಡಬೇಕು. ಸಹಪಠ್ಯ ಚಟುವಟಿಕೆಗಳನ್ನು ಶಾಲಾ ಹಂತದಲ್ಲಿ ಹಮ್ಮಿಕೊಳ್ಳುವುದಾಗಿದೆ. ನಾವು ವಿವಿಧ ಶಾಲೆಗಳಲ್ಲಿ ಹಮ್ಮಿಕೊಂಡ ಸಹಪಠ್ಯ ಚಟುವಟಿಕೆಯ ಮಾಹಿತಿ ಸಂಗ್ರಹಿಸಿದ್ದೇವೆ. ಈ ಮಾಧ್ಯಮಿಕ ಶಾಲೆಗಳಲ್ಲಿ ಸಹಪಠ್ಯ ಚಟುಟಿಕೆಗಳನ್ನು ಹಮ್ಮಿಕೊಂಡಾಗ ಮಾತ್ರ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆ ಸಾಧ್ಯ.

ಸಹ ಪಠ್ಯ ಚಟುವಟಿಕೆಗಳು ಪಠ್ಯ ಚಟುವಟಿಕೆಗಳ ಹಾಗೆ ಶಾಲೆ ಚಟುವಟಿಕೆಗಳ ಅವಿಭಾಜ್ಯ ಅಂಗ ಮತ್ತು ಅವುಗಳ ಸರಿಯಾದ ವ್ಯವಸ್ಥೆಗೆ ತುಂಬಾ ಜಾಗರೂಕತೆ ಹಾಗೂ ಮುಂದಾಲೋಚನೆ ಬೇಕು (ಮೊದಲಿಯರ ಆಯೋಗ-೧೯೫೨-೫೪), ಜಾನ ಡೂಯಿ ಅವರು "ಮಾಡುತ್ತಾ ಕಲಿ" ಎಂಬ ತತ್ವವನ್ನು ಸಾರಿದ್ದಾರೆ. ಶಿಕ್ಷಣವು ಒಂದು ಅನುಭವ. ಕೇವಲ ಪುಸ್ತಕ ಅಧ್ಯಯನದಿಂದ ಸಂಪೂರ್ಣ ವ್ಯಕ್ತಿತ್ವ ಅರಳಲಾರದು. ಸಹಪಠ್ಯ ಚಟುವಟಿಕೆಗಳೂ ಶಿಕ್ಷಣದ ಪ್ರಕ್ರಿಯೆಯನ್ನು ಪರಿಪೂರ್ಣಗೊಳಸಲು ನೆರವಾಗುತ್ತದೆ. ಆಧುನಿಕ ಶಿಕ್ಷಣ ತಜ್ಞರ ಅಭಿಪ್ರಾಯದಂತೆ ಶಿಕ್ಷಣ ಧ್ಯೇಯವು ಕೇವಲ ಬೌದ್ಧಿಕ ವಿಕಾಸವಲ್ಲ. ದೈಹಿಕ ಮಾನಸಿಕ, ನೈತಿಕ ಸಮಾಜಿಕ, ಸೌಂದರ್ಯೋಪಾಸನೆ, ಸಾಂಸ್ಕೃತಿಕ ಹೀಗೆ ಸಮಗ್ರ, ವ್ಯಕ್ತಿತ್ವ ವಿಕಾಸಗೊಳ್ಳ ಬೇಕು. ಸಹಪಠ್ಯ ಚಟುವಟಿಕೆಗಳನ್ನು ಪಠ್ಯೇತರ ಚಟುಟಿಕೆಗಳೆಂದು ಪ್ರತ್ಯೇಕಿಸುವುದು ಸಲ್ಲದು. ಇವು ಶಾಲೆಯ ಚಟುವಟಿಕೆೌಳಗೆ ಪೂರಕವಾಗಿಯೇ ಯೋಜಿಸಲ್ಪಡುತ್ತದೆ.

## ಸಹಪಠ್ಯ ಚಟುವಟಿಕೆಗಳ ಉದ್ದೇಶ :

- ✦ ವಿದ್ಯಾರ್ಥಿಗಳ ವಿವಿಧ ಸೂಪ್ತ ಪ್ರತಿಭೆಗಳಗೆಲ ಪ್ರಚೋದನೆ ಲಭಿಸುವಂತೆ ಮಾಡುವುದು.
- ✦ ಲಲಿತ ಕಲೆಗಳಗೆ ಪ್ರೋತ್ಸಾಹ ನೀಡುವುದು.
- ✦ ನಾಯಕತ್ವ ತರಬೇತಿ ಕೊಡುವುದು.
- ✦ ವಿದ್ಯಾರ್ಥಿಯ ಸರ್ವತೋಮುಖ ಅಭಿವೃದ್ಧಿಗಾಗಿ.
- ✦ ಸಮತೋಪನ ವ್ಯಕ್ತಿತ್ವದ ನಿರ್ಮಾಣದ ಉದ್ದೇಶ
- ✦ ವಿದ್ಯಾರ್ಥಿಗಳಲ್ಲಿ ರಸಭಾವಗಳನ್ನು ಬೆಳೆಸುವುದು.

## ಮಹತ್ವ:

ಸಹಪಠ್ಯ ಚಟುವಟಿಕೆಗಳನ್ನು ಶಾಲೆಗಳಲ್ಲಿ ಸಂಘಟನೆ ಮಾಡುವುದರಿಂದ ವಿದ್ಯಾರ್ಥಿಗಳಿಗೆ ವೈವಿದ್ಯಮಯ ಚಟುವಟಿಕೆಗಳ ಮೂಲಕ ಕಲಿಕೆಯಲ್ಲಿ ಹರ್ಷದಾಯಕ ಹಾಗೂ ಗಾಢ ಅನುಭವವು ಉಂಟು ಮಾಡುವುದು ಮತ್ತು ಇವು ಬಿಡುವಿನ ವೇಳೆಯ ಸದ್ವಿನಿಯೋಗಕ್ಕೆ ನೆರವು ಮಾಡುತ್ತದೆ. ಕೇವಲ ಓದಿನಿಂದ ಬದುಕುವ ಕಲೆ ಕರಗತವಾಗಲಾರದು ಸಹಪಟ್ಯ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಯು ಇತರರೊಂದಿಗೆ ಬೆರೆತು ಶಿಸ್ತು ಸಂಯಮ ಸಂಘಟನೆಗಳನ್ನು ಬೆಳೆಸಿಕೊಂಡು ಸಮುದಾಯಿಕವಾಗಿ ಬದುಕುವ ಕಲೆ ರೂಪಿಸಿಕೊಳ್ಳಬಲ್ಲ ವಿದ್ಯಾರ್ಥಿಯ ಅಹಂ ಸ್ವಭಾವ ಬದಿಗೆ ಸರಿದು ಸಹ ಜೀವನ ಮತ್ತು ಸಂಘ ಜಿವನ ನಡೆಸಬಲ್ಲ ಮಕ್ಕಳಗೆ ಕಲಿಕೆಯು ಕಷ್ಟಕರ ವಾಗಿರದೆ ಹರ್ಷದಾಯಕ ಚಟುವಟಿಕೆ ಆಗಬೇಕು. ಹರ್ಷದೊಂದಿಗೆ ಕಲಿಕೆ ಉಂಟಾದಾಗ ಸಿಹಿ ಲೇಪನದ ಮಾತ್ರೆಗಳಂತೆ ಶೈಕ್ಷಣಿಕ ಮೌಲ್ಯಗಳು ವಿದ್ಯಾರ್ಥಿಗಳಲ್ಲಿ ಅಂತರ್ಗತಗೊಳ್ಳುತ್ತವೆ.

ಇತಿಹಾಸ ಪೌರನೀತಿ ಭೂಗೋಳ ಶಾಸ್ತ್ರ, ಭಾಷಾ ಶಾಸ್ತ್ರ, ಸಸ್ಯ ಶಾಸ್ತ್ರ, ಇತ್ಯಾದಿ ವಿಷಯಗಳ ಕಲಿಕೆಗೆ ಸಹಪಠ್ಯ ಚಟುವಟಿಕೆಗಳು ಪೂರಕ ಜ್ಞಾನ ಪೂರೈಸಿ, ಕಲಿಕೆಯನ್ನು ಸಶಕ್ತಗೊಳಸುತ್ತವೆ. ಉದಾಹರಣೆಗೆ ಪ್ರವಾಸಗಳು ಇತಿಹಾಸ ಅರಿಯಲು ವಿದ್ಯಾರ್ಥಿ ಮಂತ್ರಿ ಮಂಡಲಗಳೂ ಪೌರ ಜೀವನ ತಿಳಯಲು, ಭಾಷಣ ಚರ್ಚೆ, ವಾರ್ಷಿಕ ಸಂಚಿಕೆಗೆ ಲೇಖನ ಬರೆಯುವದು ಇತ್ಯಾದಿಗಳು ಭಾಷಾ ಅಭಿವೃದ್ಧಿಗೆ ಸಹಾಯಕವಾಗುತ್ತದೆ.

## ಉಪಸಂಹಾರ:

ಸಹಪಠ್ಯ ಚಟುವಟಿಕೆಗಳನ್ನು ಶಾಲೆಗಳಲ್ಲಿ ಸಂಘಟಿಸುವದರಿಂದ ಶಾಲೆಯ ತೋಟದ ಅಭಿವೃದ್ಧಿ ಆವರಣ ಸ್ವಚ್ಚಗೊಳಸುವಿಕೆ ಶ್ರಮದಾನ ಮುಂತಾದ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದರ ಮೂಲಕ ಎಲ್ಲ ಕೆಲಸಗಳು ಗೌರವಾನ್ವಿತವಾಗಿ ಕಾಣುವ ಮೂಲಕ, ಇದು ನಮ್ಮ ಶಾಲೆ ಇದರ ಅಭಿವೃದ್ಧಿ ವಿದ್ಯಾರ್ಥಿಗಳಂದ ಸಾದ್ಯ ಎಂಬ ಪರಿಕಲ್ಪನೆ ವಿದ್ಯಾರ್ಥಿ ಸಮುದಾಯದಲ್ಲಿ ನೆಲೆಗೊಳ್ಳಬಹುದು. ಅಷ್ಟೇ ಅಲ್ಲದೇ ಇವುಗಳಂದ ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣಗಳು ಬೆಳವಣಿಗೆಯಾಗುತ್ತವೆ.

ಸಹಪಠ್ಯ ಚಟುವಟಿಕೆಗಳನ್ನು ಸಂಘಟನೆಯಿಂದ ಶಾರೀರಿಕ ಹಾಗೂ ಮಾನಸಿಕ ಬೆಳವಣಿಗೆ ಉತ್ತಮ ರೀತಿಯಲ್ಲಿ ಆಗುತ್ತವೆ. ಹಾಗೆ ವರ್ಗ ಕೋಣೆ ವಾತಾವರಣದಿಂದ ವಿದ್ಯಾರ್ಥಿಗಳಲ್ಲಿ ಕೆಲ ವೇಳೆಯ ವಗೆರೆ ಹೊರಗೆ ತಂದು, ತಿರುಗಿ ತಮ್ಮ

ಪಾಠವನ್ನು ಕಲಿಯಲು ಉತ್ಸಾಹ ಭರಿತರನ್ನಾಗಿ ಮಾಡುತ್ತವೆ. ಮತ್ತು ಸಹಪಠ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದರಿಂದ ಶಾಲೆ ಮತ್ತು ಸಮುದಾಯಗಳು ಪರಸ್ಪರ ಬೆರೆಯುತ್ತವೆ. ಶಾಲೆಯ ವಾರ್ಷಿಕೋತ್ಸವ, ಶಾಲೆ ಮತ್ತು ಪ್ರದರ್ಶನ ವಿದ್ಯಾರ್ಥಿ ಪೋಷಕರ ಸಭೆ ಇತ್ಯಾದಿಗಳ ಪೋಷಕರನ್ನು ಶಾಲೆಯ ಕಡೆಗೆ ಆಕರ್ಷಿಸುತ್ತವೆ. ಶಾಲೆಯ ಶಿಕ್ಷಕ ವರ್ಗವು ಸಹ ಸಮುದಾಯದೊಂದಿಗೆ ಬೆರೆಯುವಂತೆ ಮಾಡುತ್ತವೆ.

## ಆಧಾರ ಗ್ರಂಥಗಳು


೧. ಯಾದವಾಡ.ಎಸ್.ಬಿ. "ಭಾರತದಲ್ಲಿ ಶಿಕ್ಷಣ ಮತ್ತು ಪ್ರಚಲಿತ ಸಮಸ್ಯೆಗಳು" ವಿದ್ಯಾನಿಧಿ ಪ್ರಕಾಶನ ಗದಗ ಎರಡನೆ ಆವೃತ್ತಿ ೧೯೯೭.

೨. ಯಾದವಾಡ. ಎಸ್.ಬಿ. "ಭಾರತದಲ್ಲಿ ಶಿಕ್ಷಣ ಉದಯ" ಶ್ರೀಲಕ್ಷ್ಮಿಪ್ರಕಾಶನ, ಕರುವಿನ ಕಟ್ಟೆ ಸರ್ಕಲ್, ಚಿತ್ರದುರ್ಗ ತೃತಿಯ ಮುದ್ರಣ. ೧೯೯೮.

೩. ಯಾದವಾಡ.ಎಸ್.ಬಿ. "ಉದಯೋನ್ಮುಖ ಭಾರತದಲ್ಲಿ ಶಿಕ್ಷಣ" ವಿದ್ಯಾನಿಧಿ ಪರಕಾಶನ, ಗದಗ ದ್ವಿತಿಯ ಮುದ್ರಣ ೧೯೯೭.

೪. ಶಂಕರರರಾವ.ಚ.ನ. "ಸಾಮಾಜಿಕ ಸಂಶೋಧನೆ ಕೈಪಿಡಿ" ಜೈ ಭಾರತ ಪ್ರಕಾಶನ, ಮಂಗಳೂರು ಪ್ರಥಮ ಮುದ್ರಣ.೧೯೯೭.

೫. ಲೋಕಾಪೂರ. ಐ.ಎ. "ಪ್ರೌಢ ಶಿಕ್ಷಣ ಹಾಗೂ ಶಿಕ್ಷಕನ ಕಾರ್ಯಗಳು" ವಿದ್ಯಾನಿಧಿ ಪ್ರಕಾಶನ ಗದಗ, ತೃತೀಯ ಆವೃತ್ತಿ ಪು.ಸಂ. ೨೮೫-೩೦೪.೧೯೯೭-೯೮

೬. ಗಂಗಾಧರಪ್ಪ.ಎನ್. ಅರ್. "ಶಿಕ್ಷಣಶಾಸ್ತ್ರ ಪರಿಚಯ ಭಾಗ-೩" ರೇಖಾ ಪ್ರಕಾಶನ ನಂ. ೧೨೭೫, ತರಳಬಾಳು ಬಡಾವನೆ, ದಾವಣಗೆರೆ, ಪ್ರಥಮ ಮುದ್ರಣ ಪು.ಸಂ. ೧೦೫, ವರ್ಷ ೧೯೯೪.

೭. ಓಬಳೇಶ ಘಟ್ಟಿ "ಪ್ರೌಢ ಶಾಲಾ ಶಿಕ್ಷಣ ಮತ್ತು ಶಿಕ್ಷಕನ ಕಾರ್ಯಗಳು" ಕೆಂಬ್ರಿಡ್ಜ್, ಪಬ್ಲಿಷಿಂಗ್ ಕಂಪನಿ, ಬೆಂಗಳೂರು-೧೯೯೬.